ರಾಜ್ಯದ ನಗರ ಯೋಜನಾ ಪ್ರಾಧಿಕಾರಗಳು ಹೊಸ ಬಡಾವಣೆಗಳ ನಿರ್ಮಾಣ ಮಾಡುವಾಗ ಜನತೆಯ ಅವಶ್ಯಕತೆಗಳಾದ ಶಾಲೆ ಮಾರುಕಟ್ಟೆ ಇತ್ಯಾದಿಗಳಿಗೆ ಜಾಗವನ್ನು ಮೀಸಲಾಗಿಡುವ ಬಗ್ಗೆ.

೬೪೪. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ನಗರಾಭಿವೃದ್ಧಿ, ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಯೋಜನಾ ಪ್ರಾಧಿಕಾರಗಳ ಜವಾಬ್ದಾರಿ ಏನು ? ಹಾಗೂ ಕರ್ತವ್ಯಗಳೇನು ?

ಆ) ಅವರು ತಯಾರಿಸಿರುವ ಯೋಜನೆಗಳನ್ನು ಪರಿಶೀಲಿಸುವವರು ಯಾರು ?

ಇ) ಹೊಸ ಬಡಾವಣೆಗಳ ಯೋಜನೆಗಳನ್ನು ಸಿದ್ಧಪಡಿಸುವಾಗ ಅವುಗಳಲ್ಲಿ ಜನರ ಶಿಕ್ಷಣ ಆರೋಗ್ಯ, ಇತ್ಯಾದಿಗಳನ್ನು ಒದಗಿಸಲು ಶಾಲೆ ಆಸ್ಪತ್ರೆ, ಇತ್ಯಾದಿಗಳಿಗೆ ಸ್ಥಳಗಳನ್ನು ಮೀಸಲಿಡ ಬೇಕೆಂಬ ನಿಯಮ ಇದೆಯೇ ?

ಈ) ದಾವಣಗೆರೆ ನಗರ ಯೋಜನಾ ಪ್ರಾಧಿಕಾರದವರು ದಾವಣಗೆರೆ ನಗರಕ್ಕೆ ಸೇರಿದ ಸುಮಾರು ೨೦೦ ಎಕರೆ ಭೂಮಿಯ ಬಗ್ಗೆ ಮಾಡಿರುವ ಬಡಾವಣೆ ಯೋಜನೆಯಲ್ಲಿ ಶಾಲೆ, ಮಾರುಕಟ್ಟೆ ಆಸ್ಪತ್ರೆ ಆಟದ ಮೈದಾನ, ಆಂಚೆ ಕಛೇರಿ ಇತ್ಯಾದಿ ಜನಾನುಕೂಲಕ್ಕಾಗಿ ನಿಗಧಿ ಮಾಡಿರುವ ಸ್ಥಳಗಳಲ್ಲಿ ಮನೆ ಗಳನ್ನು ಕಟ್ಟಲು ಅವಕಾಶಕೊಟ್ಟಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ. ಎ. ಲಕ್ಷ್ಮೀಸಾಗರ್ (ನ್ಯಾಯ ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು). —

ಅ) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ನಿಯಮ ೧೯೬೧ರಡಿಯಲ್ಲಿ ಹಲವು ನಗರ ಹಾಗೂ ಪಟ್ಟಣಗಳ ಯೋಜನೆಗಳನ್ನು ತಯಾರಿಸುವ ಸಲುವಾಗಿ ಓ.ಡಿ.ಪಿ. ಸಿ.ಡಿ.ಪಿ, ಮತ್ತು ಟೌನ್ ಪ್ಲಾನಿಂಗ್ ಸ್ಕೀಂಗಳನ್ನು ಪ್ರಾಧಿಕಾರಗಳನ್ನು ಸರ್ಕಾರವು ರಚಿಸಿದೆ. ಪ್ರಾಧಿಕಾರವು ಸ್ವಾಯತ್ತ ಹಾಗೂ ಸ್ವತಂತ್ರ ಸಂಸ್ಥೆಗಳಾಗಿದ್ದು ಸರ್ಕಾರದ ನೇರ ಅಧೀನದಲ್ಲಿ ಬರುತ್ತವೆ, ಪ್ರಾಧಿಕಾರಗಳಿಗೆ ಸರ್ಕಾರವು ಒಪ್ಪಿರುವ ಸ್ಥಳಾಭಿವೃದ್ಧಿ ಯೋಜನೆ ವ್ಯಾಪಕಾಭಿವೃದ್ಧಿ ಯೋಜನೆಯ ರೀತ್ಯ ಖಾಸಗೀ ವಿನ್ಯಾಸ ಮತ್ತು ಇತರೆ ಅಭಿವೃದ್ಧಿಗಳನ್ನು ಮಂಜೂರು ಮಾಡುವ ಅಧಿಕಾರವಿದೆ.

ಆ) ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನಾ ನಿಯಮ ೧೯೬೧ರ ರೀತ್ಯ ಪ್ರಾಧಿಕಾರ ಗಳು ತಯಾರಿಸಿದ ಸ್ಥಳಾಭಿವೃದ್ಧಿ ಯೋಜನೆ ವ್ಯಾಪಕಾಭಿವೃದ್ಧಿ ಯೋಜನೆಗಳನ್ನು ನಗರ ಯೋಜನಾ ನಿರ್ದೇಶಕರು ಪರಿಶೀಲಿಸಿದ ನಂತರ ಸದರಿಯವರ ಶಿಫಾರಸ್ಸಿನ ಮೇಲೆ ಸರ್ಕಾರವು ಒಪ್ಪಿಗೆ ನೀಡುವುದು. ಸ್ಥಳಾಭಿವೃದ್ಧಿ ಯೋಜನೆ ವ್ಯಾಪಕಾಭಿವೃದ್ಧಿ ಯೋಜನೆಗೆ ಸರ್ಕಾರವು ಒಪ್ಪಿಗೆ ನೀಡಿದ ನಂತರ ಖಾಸಗಿ ವಿನ್ಯಾಸಗಳು, ನಗರಾಭಿವೃದ್ಧಿ ಮಂಡಳಿಗಾಗಿ ವಿನ್ಯಾಸಗಳು ಹಾಗೂ ಇತರ ವಿನ್ಯಾಸಗಳಿಗೆ ಸರ್ಕಾರವು ಒಪ್ಪಿಗೆ ಇತ್ತಿರುವ ಸ್ಥಳಾಭಿವೃದ್ಧಿ ಯೋಜನೆ : ವ್ಯಾಪಕಾಭಿವೃದ್ಧಿ ಯೋಜನೆ ರೀತ್ಯ ಒಪ್ಪಿಗೆ ನೀಡುವ ಪೂರ್ಣ ಅಧಿಕಾರವು ಪ್ರಾಧಿಕಾರಗಳಿಗೆ ಇದೆ. ವಿನ್ಯಾಸಗಳು ಒಪ್ಪಿಗೆಯ ಬಗ್ಗೆ ತಕರಾರುಗಳೇನಾದರೂ ಇದ್ದಲ್ಲಿ ಸರ್ಕಾರವು ಮೇಲ್ಮನವಿಗಳನ್ನು ಪರಿಶೀಲಿಸಲು ಅಧಿಕಾರ ಹೊಂದಿದೆ.

ಇ) ಸ್ಥಳಾಭಿವೃದ್ಧಿ ಯೋಜನೆ ವ್ಯಾಪಕಾಭಿವೃದ್ಧಿ ಯೋಜನೆಗಳಲ್ಲಿ ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನಾ ನಿಯಮ ೧೯೬೧ರ ಅಧಿನಿಯಮ ೧೫ರ ರೀತ್ಯ ವಾಸೋಪಯೋಗ, ವಾಣಿಜ್ಯ, ಔದ್ಯೋಗಿಕ ವಿಹಾರ ಕ್ರೀಡೆ ಇತ್ಯಾದಿ, ಶಿಕ್ಷಣ ಹಾಗೂ ಇತರೆ ಸಾರ್ವಜನಿಕ ಉಪಯೋಗ ಗಳಿಗಾಗಿ ಭೂಮಿಯನ್ನು ಕಾಯ್ದಿರಿಸಬೇಕಾಗಿದೆ, ಈ ಬಗ್ಗೆ ನಗರ ಯೋಜನಾ ಇಲಾಖೆಯು ದಿನಾಂಕ ೨೯-೮-೧೯೭೭ರಂದು ಸಾರ್ವಜನಿಕ ಸೌಲಭ್ಯಗಳ ಪ್ರಮಾಣದ ಬಗ್ಗೆ ಸುತ್ತೋಲೆಯೊಂದನ್ನು ನೀಡಿದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ ತಮ್ಮ ಮುಖಾಲಕ ಮಾನ್ಯ ಸಚಿವರಲ್ಲಿ ಒಂದು ವಿಷಯವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ದಾವಣಗೆರೆ ಯೋಜನಾ ಪ್ರಾಧಿಕಾರದವರು ಯಾವಾಗಿನಿಂದ ಆ ಕೆಲಸವನ್ನು ಆರಂಭ ಮಾಡಿದರು ? ಈ ಯೋಜನಾ ಪ್ರಾಧಿಕಾರ ದಾವಣಗೆರೆ-ಹರಿಹರ ಮಧ್ಯೆ ಇರತಕ್ಕ ೬೮ ಹಳ್ಳಿಗಳನ್ನು ಒಳಗೊಂಡಿರತಕ್ಕದೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಇದರ ಬಗ್ಗೆ ಸ್ಥೂಲವಾದ ನೀಲಿ ನಕಾಶೆಯನ್ನು ತಯಾರು ಮಾಡಿದ್ದಾರೆಯೆ ? ತಯಾರು ಮಾಡಿದ್ದರೆ ಅಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಶಾಲೆ, ಆಟದ ಮೈದಾನ, ಮಾರ್ಕೆಟ್, ವೈದ್ಯಕೀಯ ಸೌಲಭ್ಯಕ್ಕಾಗಿ ಸ್ಥಳಗಳನ್ನು ಕಾದಿರಿಸಲಾಗಿದೆಯೆ ? ಕಾದಿರಿಸಿದ್ದರೆ ಅದಕ್ಕಾಗಿ ಏನಾದರೂ ಗುರುತು ಮಾಡಿದ್ದಾರೆಯೆ ?

ಶ್ರೀ ಎ. ಲಕ್ಷ್ಮೀಸಾಗರ್.—ಕಾದಿರಿಸಬೇಕೆಂದು ಕಾನೂನಿನಲ್ಲಿದೆ. ಅದನ್ನು ನಿರಾಕರಿಸಿ ಏನಾದರೂ ವ್ಯವಹಾರಗಳು ನಡೆದಿದ್ದರೆ ಅದನ್ನು ನನಗೆ ನೇರವಾಗಿ ತಿಳಿಸಿದರೆ ಅದರ ಬಗ್ಗೆ ವಿವರಗಳನ್ನು ತರಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪಂಪಾಪತಿ.— ಈ ಕೆಲಸ ಪ್ರಾರಂಭವಾಗಿ ಎಷ್ಟು ವರ್ಷಗಳಾಗಿವೆ ? ಮಾಸ್ಟರ್ ಪ್ಲಾನ್ ನೀಲಿ ನಕ್ಷೆಯನ್ನು ಮೊದಲೇ ತಯಾರು ಮಾಡಿದ್ದರೆ ಎಲ್ಲ ವಿನ್ಯಾಸಗಳನ್ನು ಕಾಣಿಸಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ಪ್ರಕಾರ ಎಲ್ಲಾ ವಿನ್ಯಾಸಗಳನ್ನು ಮಾಡಿ ಮುಂದಿನ ಕ್ರಮ ಮಾಡಬೇಕಾಗುತ್ತದೆ. ಕಂಟ್ರಿ ಟೌನ್ ಪ್ಲಾನ್ ಆಕ್ಟ್ ಪ್ರಕಾರ ಎಲ್ಲ ವಿವರಗಳನ್ನೊಳಗೊಂಡ ನೀಲಿ ನಕ್ಷೆಯನ್ನು ತಯಾರು ಮಾಡಲಾಗುತ್ತದೆ. ಸಾರ್ವಜನಿಕ ಅಭಿವೃದ್ಧಿಯ ಉದ್ದೇಶಗಳನ್ನು ಗಮನದಲ್ಲಿಟ್ಟು ವ್ಯವಸ್ಥಿತವಾದ ನಕ್ಷೆಯನ್ನು ತಯಾರು ಮಾಡಬೇಕೆಂದು ಕಾನೂನಿನಲ್ಲಿದೆ.

ಶ್ರೀ ಪಂಪಾಪತಿ.— ಕಾನೂನು ಇದೆ. ಅದನ್ನು ಅಳವಡಿಸಿಕೊಂಡು ಇವತ್ತು ಕೆಲಸ ಮಾಡುತ್ತಿದ್ದಾರೆ. ಮಾಸ್ಟರ್ ಪ್ಲಾನ್ ದೊಡ್ಡ ದೊಡ್ಡ ಪ್ಲಾನ್‌ಗಳನ್ನು ಎಲ್ಲ ಕಛೇರಿಗಳಲ್ಲೂ ಇಟ್ಟುಕೊಂಡಿರುತ್ತಾರೆ. ಹೇಳಿರತಕ್ಕ ಹಿನ್ನೆಲೆಯಲ್ಲಿ ಅವರು ಗುರುತು ಮಾಡಿರುವುದಿಲ್ಲ. ಯಾವ ಜಾಗವನ್ನು ಸ್ಕೂಲ್ ಆಟದ ಮೈದಾನ, ಮಾರ್ಕೆಟ್‌ಗಾಗಿ ವಿೂಸಲಾಗಿ ಇಡಲಾಗಿತ್ತೋ ಅಂತಹ ಜಾಗವನ್ನು ಅಧಿಕಾರಿಗಳಿಗೆ ಮನೆಗಳನ್ನು ಕಟ್ಟುವುದಕ್ಕೆ ಅನುಮತಿಯೆಂದನ್ನ ಕೊಟ್ಟಿದ್ದಾರೆ. ಇಂತಹ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ತಮ್ಮನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಈಗಾಗಲೇ ಹೇಳಿದ್ದೇನೆ. ಕಂಟ್ರಿ ಟೌನ್ ಪ್ಲಾನ್ ಆಕ್ಟ್‌ಗೆ ವಿರುದ್ಧವಾಗಿ ಮಾಡಿದ್ದರೆ ಅಲ್ಲಿಂದ ವಿವರಗಳನ್ನು ತರಿಸಿಕೊಂಡು ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ನಾನು ತಮಗೆ ಮೂರು ಉಪ-ಪ್ರಶ್ನೆಗಳನ್ನು ಹಾಕಲಿಕ್ಕೆ ಅವಕಾಶ ಕೊಟ್ಟಿದ್ದೇನೆ. ನಾಲ್ಕನೇ ಸಾರಿ ಅವಕಾಶ ಕೊಡಿ ಎಂದರೆ ಹೇಗೆ ಕೊಡುವುದು? ಉಳಿದವರಿಗೆ ಅವಕಾಶ ಕೊಡಬಾರದೆ? ದಯವಿಟ್ಟು ತಾವು ಕುಳಿತುಕೊಳ್ಳಿ, ಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಪಂಪಾಪತಿ.—ಮಂತ್ರಿಗಳು ಅಲ್ಲಿಂದ ವಿವರಗಳನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸಿದರೆ ಅವರು ಎಲ್ಲವೂ ಸರಿಯಾಗಿದೆಯೆಂದು ಬರೆದುಕೊಂಡು ಬರುತ್ತಾರೆ. ನೀವು ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಪ್ರಶ್ನೆಯನ್ನು ಗಮನದಲ್ಲಿಟ್ಟು ಪೂರಕವಾಗಿ ಯಾರು ತಪ್ಪು ಮಾಡಿದ್ದಾರೆ, ಅವರಿಂದ ಮೊದಲು ಉತ್ತರ ತರಿಸಿಕೊಳ್ಳುತ್ತೇನೆ. ಅವರು ಮಾಡಿರುವಂತಹ ಕೆಲಸವನ್ನು ಪರೀಕ್ಷೆ ಮಾಡಿಸುತ್ತೇನೆ, ಯಾರು ತಪ್ಪು ಮಾಡಿರುತ್ತಾರೆ. ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸುಲಭವಾಗುತ್ತದೆ. ತಪ್ಪಿತಸ್ಥರು ಬೇಗ ಸಿಗುತ್ತಾರೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿದಿದೆ, ಆದರೂ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಸದಸ್ಯರು ಒಂದೆರಡು ಉಪ ಪ್ರಶ್ನೆಗಳನ್ನು ಮಾತ್ರ ಕೇಳಬೇಕು.